	8. ಸಿರುಗುಪ್ಪಾ ತಾಲ್ಲೂಕು	4	-	4	-	
20.	ಬೀದರ್ ಜಿಲ್ಲೆ	32	-	32	4	
	1. ಬಸವಕಲ್ಯಾಣ ತಾಲ್ಲೂಕು	6	-	6	1	
	2. ಭಾಲ್ಕಿ ತಾಲ್ಲೂಕು	8	-	8	1	
	3. ಬೀದರ್ ತಾಲ್ಲೂಕು	6	-	6	2	
	4. ಹುಮ್ನಾಬಾದ್ ತಾಲ್ಲೂಕು	9	-	9	-	
	5. ಔರಾದ್ ತಾಲ್ಲೂಕು	3	-	3	-	
	ಒಟ್ಟು	805	23	828	107	

ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಲಾದ ಅಕ್ಕಿಯ ದರ ಕುರಿತು

2040 - ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿ.ಸಿ.ಎಂ. ಮತ್ತು ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳಿಗೆ ಎಷ್ಟೆಷ್ಟು ದರದಲ್ಲಿ ಅಕ್ಕಿಯನ್ನು ಸರಬರಾಜು ಮಾಡಲಾಗುತ್ತಿದೆ?*

ಆ) *ಬಿ.ಸಿ.ಎಂ. ಮತ್ತು ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳ ಸೌದಿಲ್ವಾರು ವೆಚ್ಚವೆಷ್ಟು?*

ಇ) *ಬಿ.ಸಿ.ಎಂ. ಮತ್ತು ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳಿಗೆ ಕೊಡುವ ಅನುದಾನ ಎಷ್ಟು?*

ಈ) *ಸಾದಿಲ್ವಾರು ವೆಚ್ಚದಲ್ಲಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿಗೆ ರಿಯಾಯಿತಿ ದರದಲ್ಲಿ ಅಂದರೆ ಕೆ.ಜಿ. ಯೊಂದಕ್ಕೆ ರೂ. 3.20 ರಂತೆ ಒಬ್ಬರಿಗೆ ಒಂದು ತಿಂಗಳಿಗೆ 10 ಕೆ.ಜಿ.ಯಂತೆ ಹಾಗೂ ಉಳಿಕೆ 5 ಕೆ.ಜಿ. ಅಕ್ಕಿಯನ್ನು ಆರ್.ಪಿ.ಡಿ.ಎಸ್. ದರದಲ್ಲಿ ನೀಡಲು ಇತ್ತೀಚಿನ ಸುತ್ತೋಲೆ ದಿನಾಂಕ 20-7-95 ಸಂಖ್ಯೆ ಡಿಎಫ್‌ಎಸ್:ಜನರಿ 11 22:91-92ರಲ್ಲಿ ಸೂಚನೆ ನೀಡಲಾಗಿದೆ.

ಬಿ.ಸಿ.ಎಂ. ಇಲಾಖೆ : ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಪ್ರತಿ ಕೆ.ಜಿ.ಗೆ ರೂ. 7.05 ದರದಲ್ಲಿ ಅಕ್ಕಿಯನ್ನು ಸರಬರಾಜು ಮಾಡಲಾಗುತ್ತಿದೆ.

ಆ) ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳ ವಸತಿದಾರರಿಗೆ ಸಾದಿಲ್ವಾರು ಅಂದರೆ 'ಕಂಟಿನ್ಜೆನ್ಸಿ' ವೆಚ್ಚವನ್ನು ನೀಡಲಾಗುತ್ತಿಲ್ಲ. ಆದರೆ 'ಇತರೆ ವೆಚ್ಚ'ದ ರೂಪದಲ್ಲಿ ಪ್ರತಿ ವಸತಿದಾರರಿಗೆ ಮಾಹೆಯಾನ ರೂ. 25.00 ರಂತೆ ಭರಿಸಲಾಗುತ್ತಿದೆ.

ಬಿ.ಸಿ.ಎಂ. ಶಾಖೆ : ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಸಾದಿಲ್ವಾರು ವೆಚ್ಚವೆಂದು ನಿಗಧಿಪಡಿಸಿರುವುದಿಲ್ಲ. ಇತರೆ ವೆಚ್ಚವೆಂದು ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 5-00ರಂತೆ ನಿಗಧಿಪಡಿಸಲಾಗಿದೆ.

ಇ) ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಆವರ್ತ ಹಾಗೂ ಅನಾವರ್ತ ವೆಚ್ಚದ ರೂಪದಲ್ಲಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಆವರ್ತ ವೆಚ್ಚ :

1)	ಭೋಜನಾ ವೆಚ್ಚ	-	ರೂ. 250.00ರಂತೆ ಮಾಹೆಯಾನ ಪ್ರತಿ ವಸತಿದಾರರಿಗೆ.
2)	ಉಡುಪು	-	ರೂ. 300.00ರಂತೆ ವಾರ್ಷಿಕವಾಗಿ ಪ್ರತಿ ವಸತಿದಾರರಿಗೆ.
3)	ಪಠ್ಯಪುಸ್ತಕ ಮತ್ತು ಸ್ಟೇಷನರಿ ವೆಚ್ಚ	-	ರೂ. 100.00ರಂತೆ ವಾರ್ಷಿಕವಾಗಿ ಪ್ರತಿ ವಸತಿದಾರರಿಗೆ.
4)	ಇತರೆ ವೆಚ್ಚ	-	ರೂ. 25.00ರಂತೆ ಮಾಹೆಯಾನ ಪ್ರತಿ ವಸತಿದಾರರಿಗೆ.
5)	ಕ್ಷೌರದ ವೆಚ್ಚ	-	ರೂ. 30.00 ರಂತೆ ವಾರ್ಷಿಕವಾಗಿ ಪ್ರತಿ ವಸತಿದಾರರಿಗೆ.
6)	ಹಾಸಿಗೆ ವೆಚ್ಚ	-	ರೂ. 300.00ರಂತೆ ಪ್ರತಿ 3 ವರ್ಷಕ್ಕೊಮ್ಮೆ ಪ್ರತಿ ವಿದ್ಯಾರ್ಥಿಗೆ.
7)	ವಾರ್ತಾ ಪತ್ರಿಕೆ	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ರೂ. 500 ವಾರ್ಷಿಕ ಮತ್ತು ನಿಯತಕಾಲಿಕ ವೆಚ್ಚ.
8)	ವೈದ್ಯಕೀಯ ವೆಚ್ಚ	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ರೂ. 1000ರಂತೆ
9)	ಕಲಾಯಿ ವೆಚ್ಚ	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ರೂ. 600 ವಾರ್ಷಿಕವಾಗಿ
10)	ವಿದ್ಯುಚ್ಛಕ್ತಿ ಮತ್ತು ನೀರಿನವೆಚ್ಚ.	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ರೂ. 1000 ವಾರ್ಷಿಕವಾಗಿ
11)	ಬಾಡಿಗೆ ವೆಚ್ಚ	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ. 1000 ಅಥವಾ ಲೋಕೋಪಯೋಗಿ ಇಲಾಖೆ ನಿಗಧಿಪಡಿಸಿದ ದರ.
12)	ಅರೆಕಾಲಿಕ ಭೋಧಕರ ಗೌರವ ಧನ		1) 50 ಸಂಖ್ಯೆಯುಳ್ಳ ವಿದ್ಯಾರ್ಥಿನಿಲಯಕ್ಕೆ ಪ್ರತಿ ಭೋಧಕರಿಗೆ ರೂ. 125 ಮಾಹೆಯಾನ.

2) 50 ಸಂಖ್ಯೆಗೂ ಹೆಚ್ಚಿರುವ ವಿದ್ಯಾರ್ಥಿ ನಿಲಯದ ಪ್ರತಿ ಭೋಧಕರಿಗೆ ರೂ. 175ರಂತೆ ಮಾಹೆಯಾನ.

ಅನಾವರ್ತ ವೆಚ್ಚ :

1)	ಕ್ರೀಡಾ ಸಾಮಗ್ರಿ	-	ಪ್ರತಿ ವಿದ್ಯಾರ್ಥಿನಿಲಯದ ಪ್ರಾರಂಭಿಸುವಾಗಿ ರೂ. 1000.
2)	ಪಾತ್ರೆ ಹಾಗೂ ಪೀಠೋಪಕರಣ	-	ಪ್ರತಿ ವಿದ್ಯಾರ್ಥಿನಿಲಯ ಪ್ರಾರಂಭಿಸುವಾಗ ರೂ. 40.000
3)	ಗ್ರಂಥಾಲಯದ ಪುಸ್ತಕ	-	ಪ್ರತಿ ವಿದ್ಯಾರ್ಥಿನಿಲಯ ಪ್ರಾರಂಭಿಸುವಾಗ ರೂ. 1500.00

ಬಿ.ಸಿ.ಎಂ. ಇಲಾಖೆ : ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ಪೂರ್ವ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡಿರುವುದಿಲ್ಲ, ಆದರೆ, ಪ್ರತಿ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 250ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 300ರಂತೆ ಭೋಜನಾ ವೆಚ್ಚವನ್ನು ಭರಿಸಲಾಗುತ್ತಿದೆ. ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮಾಹೆಯಾನ 250ರಂತೆ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ಭೋಜನಾ ವೆಚ್ಚಕ್ಕಾಗಿ ಅನುದಾನವನ್ನು ನೀಡಲಾಗುತ್ತಿದೆ.

ಈ) ಸಮಾಜ ಕಲ್ಯಾಣ ಇಲಾಖೆ ಬಿ.ಸಿ.ಎಂ. ಇಲಾಖೆ

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ದೊರೆಯತ್ತಿರುವ ಸೌಲಭ್ಯಗಳಿಗೂ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ನೀಡುತ್ತಿರುವ ಸೌಲಭ್ಯಗಳಲ್ಲಿ ವ್ಯತ್ಯಾಸವಿರುತ್ತದೆ. ತಾರತಮ್ಯವಿರುವ ಅಂದರೆ, ಇತರೆ ವೆಚ್ಚ ಸಮವಸ್ತ್ರ, ಪಠ್ಯಪುಸ್ತಕ ಮತ್ತು ಲೇಖನಸಾಮಗ್ರಿ ವೆಚ್ಚಗಳಲ್ಲಿ ವ್ಯತ್ಯಾಸವಿದ್ದು ಸದರಿ ತಾರತಮ್ಯವನ್ನು ನಿವಾರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

1995-96ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವರ್ಗಾವಣೆಗಳ ಬಗ್ಗೆ

1004 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆದಿರುವ ವರ್ಗಾವಣೆಗಳೆಷ್ಟು? ವರ್ಗವಾರು ವಿವರ ಒದಗಿಸುವುದು?

ಆ) ವರ್ಗಾವಣೆಯಿಂದ ಸರ್ಕಾರದ ಬೊಕ್ಕಸಕ್ಕೆ ಖರ್ಚಾದ ಹಣವೆಷ್ಟು?

ಇ) ಕೋರಿಕೆಯ ಮೇಲೆ ಆದ ವರ್ಗಾವಣೆ ಎಷ್ಟು? ಹಾಗೂ ಸರ್ಕಾರ ಮಾಡಿರುವ ವರ್ಗಾವಣೆ ಎಷ್ಟು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ 1995-96ನೇ ಸಾಲಿನಲ್ಲಿ ನಡೆದಿರುವ ವರ್ಗಾವಣೆಗಳ ವರ್ಗವಾರು ವಿವರ ಈ ಕೆಳಕಂಡಂತಿದೆ.

ಎ. ವರ್ಗ	ಬಿ.ವರ್ಗ	ಸಿ.ವರ್ಗ	ಡಿ.ವರ್ಗ	ಒಟ್ಟು
16	14	410	157	597